C.R.P.67

Form No.4 (Civil)
Deposition Sheets
(R.P.No.57)

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ.

ಎಸ್ ಸಿ ಸಂಖ್ಯೆ:**101/2023 C/W 113/2023**

ಪ್ರಾಸಾ. **10** ಚಾಸಾ. **10**

ಸಾಕ್ಷಿದಾರರ ಹೆಸರು	ಬಿಳಿಗೌಡ
ತಂದೆಯ ಹೆಸರು	ಮಾಯಿಗೌಡ
ವಯಸ್ಸು	**46** ವರ್ಷಗಳು
ಉದ್ಯೋಗ	ವ್ಯವಸಾಯ
ವಾಸ	ದೊಡ್ಡರಸಿನಕೆರೆ

ಸಾಕ್ಷಿಯನ್ನು ದಿನಾಂಕಃ **30.06.2025** ರಂದು ಕರೆಯಿಸಿ ಪ್ರಮಾಣ ವಚನ
ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-**11** ಗೊತ್ತು. ಈಗ ಒಂದು ನೋಟೀಸನ್ನು ನೋಡುತ್ತಿದ್ದು, ಸದರಿ ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿಪಿ-**23** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**23**(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-**2** ಮತ್ತು ನಿಪಿ-**4** ಮಹಜರಗಳನ್ನು ನೋಡುತ್ತಿದ್ದು, ಸದರಿ ಮಹಜರ್ ಗಳಲ್ಲಿಯೂ ಸಹ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-**2**(ಬಿ) ಮತ್ತು ನಿಪಿ-**4**(ಬಿ) ಎಂದು ಗುರುತಿಸಲಾಯಿತು.

2. ಸುಮಾರು ಎರಡು ವರ್ಷಗಳ ಹಿಂದೆ ಕೆ.ಎಂ.ದೊಡ್ಡಿ ಪೊ.ಠಾಣೆಯಲ್ಲಿ ಸದರಿ ದಾಖಲೆಗೆ ಸಹಿ ಹಾಕಿರುತ್ತೇನೆ. ಆ ದಿನ ನಾನು ಪೊ.ಠಾಣೆ ಪಕ್ಕದಲ್ಲಿರುವ ಗ್ಯಾರೇಜ್ ಬಳಿ ನನ್ನ ವಾಹನವನ್ನು ರಿಪೇರಿ ಮಾಡಿಸಲು ಹೋಗಿದ್ದಾಗ ಪೊಲೀಸರು ನನ್ನನ್ನು ಕರೆಯಿಸಿ ದಾಖಲೆಗಳಿಗೆ ಸಹಿ ಮಾಡಿಸಿರುತ್ತಾರೆ. ಸದರಿ ದಾಖಲೆಗಳಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ವಸ್ತು ಅಮಾನತುಪಡಿಸಿಕೊಂಡಿರುವುದಿಲ್ಲ. ಈಗ ಮು.ಮ.**2** ರಿಂದ **4** ಮತ್ತು ಮು.ಮ.**5** ರಿಂದ **11** ನೋಡುತ್ತಿದ್ದು, ಅವುಗಳನ್ನು ಗುರುತಿಸಲು ಆಗುವುದಿಲ್ಲ.

ಸಾಕ್ಷಿಗೆ 1 ರಿಂದ 8 ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋವಿನಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಮತ್ತು ನಮ್ಮ ಊರಿನಿಂದ ಅಂದರೆ ದೊಡ್ಡರಸಿನಕರೆಯಿಂದ ದೇವರಹಳ್ಳಿಗೆ ಹೋಗುವ ರಸ್ತೆಗೆ ಕರೆದುಕೊಂಡು ಹೋಗಿ ಪೊಲೀಸರು ನಮ್ಮ ಫೋಟೋ ತೆಗೆಸಿರುತ್ತಾರೆ. ಆದರೆ ಯಾವ ಕಾರಣದಿಂದ ಫೊಟೋ ತೆಗೆದರು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿಃ21.11.2022 ರಂದು ದೊಡ್ಡಅರಸಿನಕೆರೆ ಗ್ರಾಮದ ಪ್ರಾಥಮಿ ಕೃಷಿ ಪತ್ತಿನ ಸಹಕಾರ ಸಂಘದ ಬಳಿ ಪೊಲಿಸರು ಬಂದಾಗ ಚಾಸಾ-1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಸ್ಥಳದಲ್ಲಿ ರಕ್ತದ ಕಲೆಯಿರುವ ಒಂದು ಹಿಡಿ ಗಾತ್ರದ ಕಾಂಕ್ರಿಟ್ ಕಲ್ಲು, ರಕ್ತ ಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡು 'ಕೆ' ಎಂಬ ಅಕ್ಷರದಿಂದ ಸೀಲ್ ಮಾಡಿಕೊಂಡು ಬೆಳಿಗೆ 6.30 ರಿಂದ 7.30 ಗಂಟೆಯವರೆಗೆ ಚಾಸಾ-10 ಮತ್ತು 11 ರವರ ಸಮಕ್ಷಮ ಮಹಜರ್ ಮಾಡಿ ವಸ್ತುಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-3(1 ಮತ್ತು 2) ನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ.

2. ಆ ನಂತರ ಪುನಃ ಕೆ.ಎಂ.ದೊಡ್ಡಿ ಗ್ರಾಮದ ದೇವರಹಳ್ಳಿ ರಸ್ತೆಯಲ್ಲಿರುವ ನಂಜಮ್ಮ ಕೋಂ ದಾಸೇಗೌಡರ ವಾಸದ ಮನೆಯ ಮುಂದಿನ ರಸ್ತೆಯಲ್ಲಿ ಪುನಃ ಅರುಣನಿಗೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿದ ಮೇರೆಗೆ ನಮ್ಮ ಸಮಕ್ಷಮ ರಸ್ತೆಯ ಮೇಲೆ ಬಿದ್ದಿದ್ದ ರಕ್ತವನ್ನು ನೀರಿನಲ್ಲಿ ಒರೆಸಿದ ಹತ್ತಿ, ಎರಡು ದೊಣ್ಣೆ, ಒಂದು ಗೊದಮೊಟ್ಟೆ, ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು, ರಕ್ತದ ಕಲೆಯಿರುವ ಹುಲ್ಲುಗಳನ್ನು ಅಮಾನತುಪಡಿಸಿಕೊಂಡು 'ಕೆ' ಎಂಬ ಅಕ್ಷರದಿಂದ ಸೀಲ್ ಮಾಡಿ ಚಾಸಾ-10 ಮತ್ತು 11 ರವರ

ಸಮಕ್ಷಮ ಬೆಳಿಗ್ಗೆ 7.45 ರಿಂದ 8.45 ಗಂಟೆಯವರೆಗೆ ನಿಪಿ-4 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಮು.ಮ.2 ರಿಂದ ಮು.ಮ.4, 5 ರಿಂದ 11 ಅಮಾನತುಪರಿಸಿಕೊಂಡರು ಎಂದರೆ ಸರಿಯಲ್ಲ. ಆ ದಿನ ಚಾಸಾ-1 ರವರು ಸ್ಥಳವನ್ನು ತೋರಿಸಿದ್ದು, ನನಗೆ ಮತ್ತು ಚಾಸಾ-11 ರವರಿಗೆ ಪೊಲೀಸರು ನಿಪಿ-23 ರಂತೆ ನೋಟೀಸ್ ನೀಡಿ ಬರಮಾಡಿಕೊಂಡು ನಮ್ಮ ಸಮಕ್ಷಮ ನಿಪಿ-2 ಮತ್ತು ನಿಪಿ-4 ರಂತೆ ಮಹಜರ್‌ಮಾಡಿ ಮು.ಮ.2 ರಿಂದ 11 ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಸಾಕ್ಷಿಯಾಗಿ ಸದರಿ ದಾಖಲೆಗಳಿಗೆ ಸಹಿ ಹಾಕಿದ್ದರೂ ಸಹ ಆರೋಪಿತರು ನಮ್ಮ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್.ಡಿ.ಆರ್. ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.